Doc 144
T-P2

Regd No BG 155 4-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಪಾಕ'ನವರಿಗೆ ಚೀನಾದವರಿಂದ ಕಿರುಕುಳ ಯುದ್ಧ ತರಬೇತಿ

### ಅಕ್ಷರತೆ

ಬೆಂಗಳೂರು— ಪುನರ್ವಿಂಗಡನಾ ನಂತರ ರಾಜ್ಯದಲ್ಲಿ ಅಕ್ಷರತೆಯುಲ್ಲಿನ ಸಂಖ್ಯೆ ಶೇಕಡಾ 10 ರಿಂದ 28 ಕ್ಕೆ ಹೆಚ್ಚಿರುವದೆಂದೂ, 32000 ಪ್ರಾಥಮಿಕ ಶಾಲೆಗಳಿದ್ದು ಶೇಕಡ 94 ಮಕ್ಕಳು ಸ್ಕೂಲಿಗೆ ಹೋಗುತ್ತಿರುವವೆಂದೂ ಶಾಸನ ಸಭೆಯಲ್ಲಿ ತಿಳಿಸಲಾಯಿತು.

### "ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ತಕ್ಕಷ್ಟು ತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'

ಚಾಮರಾಜಪುರಂ, ಮೈಸೂರು 4.

### ಟೀ ತೋಟದ ಕಾರ್ಮಿಕರ ಮುಷ್ಕರದ ಫಲ

ಕಲ್ಕತ್ತಾ— ಪಶ್ಚಿಮ ಬಂಗಾಳಾದಲ್ಲಿ ಟೀ ತೋಟಗಳ ಕಾರ್ಮಿಕರ 16 ದಿನಗಳ ಮುಷ್ಕರದಿಂದ . ದೇಶಕ್ಕೆ ರೂ 250 ಲಕ್ಷ ವಿದೇಶೀ ವಿನಿಮಯ ನಷ್ಟವಾಯಿತು ; ಕೈಗಾರಿಕೆಗೆ ರೂ 420 ಲಕ್ಷ ಮೌಲ್ಯದ 70 ಲಕ್ಷ ಕೆಜಿ ಟೀ ಉತ್ಪಾದನೆ ನಷ್ಟವಾಯಿತು ; ಕಾರ್ಮಿಕರು ರೂ. 70 ಲಕ್ಷ ಕೂಲಿ ಕಳೆದುಕೊಂಡರು.

★

### ಬ್ರಿಟಿಷ್ ಪಾರ್ಲಿಮೆಂಟನಲ್ಲಿ ಗಾಂಧೀಜಿ ಪ್ರಶಂಸೆ

ನವದೆಹಲಿ – ಭಾರತದ ಜನತೆಗೆ ಮತ್ತು ವಿಶ್ವಕ್ಕೆ ಮಹಾತ್ಮಾ ಗಾಂಧಿಯವರು ಮಾಡಿರುವ ಅಗಾಧ ಕಾರ್ಯಗಳ ಮತ್ತು ಬ್ರಿಟಿಷ್ ಜನತೆಗೆ ಅವರ ಮೈತ್ರಿ ಒಪ್ಪುವ ಶರಾವು ಬ್ರಿಟಿಷ್ ಪಾರ್ಲಿಮೆಂಟನಲ್ಲಿಯ ರೆಕಾರ್ಡಿನಲ್ಲಿ ಲಿಖಿಸಲ್ಪಟ್ಟಿತು.

★

### ಗ್ರಾಮದ ಅಕೌಂಟಿಂಟರು

ಬೆಂಗಳೂರು— ಮಿಕ್ಕಿರುವ ಗ್ರಾಮಗುಮಾಸ್ತೆ ಸ್ಥಾನಗಳನ್ನು ಮಂತ್ರಿಮಂಡಲವು ಇನ್ನು ಒಂದೆರಡು ವಾರಗಳಲ್ಲಿ ಮುಂಜೂಂಮ್ಮಡಲಿರುವದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

### ಕಿರುಕುಳ ಯುದ್ಧದಲ್ಲಿ ತರಬೇತು

ನವದೆಹಲಿ— ಪೂರ್ವ ಪಾಕಿಸ್ತಾನದಲ್ಲಿ ಪಾಕಿಸ್ತಾನ ಸಶಸ್ತ್ರ ಪಡೆಗಳ ಅಧಿಕಾರಿಗಳು ಮತ್ತು ಜನರಿಗೆ ಚೀನ ಕಿರುಕುಳ ಯುದ್ಧದಲ್ಲಿ ತರಬೇತು ಮಾಡಲಿರುವದೆಂದು ಪ್ರಕಟವಾಗಿದೆ.

★

### ಸ್ವಯಂಸೇವಕರು

ತಂಜಾವೂರು— ತಂಜಾವೂರು ಜಿಲ್ಲೆಯಲ್ಲಿ ಈಗ ಇರುವ 1500 ಕಮ್ಯುನಿಸ್ಟು ಕರನ್ನು 3000 ಕ್ಕೆ ಹೆಚ್ಚಿಸಲಾಗುವುದು.

### ಸಭಾ ಪರಿತ್ಯಾಗ

ಬೆಂಗಳೂರು— ಎಲೆಕ್ಟ್ರಿಸಿಟಿ ಬೋರ್ಡು ಪಂಪ್‌ಸೆಟ್ ಬಗ್ಗೆ ವಿಧಿಸಿರುವ ಹೆಚ್ಚು ಹೊರೆ ತೆಗೆಯಲಾಗುವದೆಂಬ ಭರವಸೆಯನ್ನು ಮುಖ್ಯಮಂತ್ರಿಗಳು ನೀಡದಿದ್ದುದನ್ನು ಪ್ರತಿಭಟಿಸಿ ನಿನ್ನೆ ಶಾಸನಸಭೆಯಲ್ಲಿ ವಿರೋಧ ಪಕ್ಷಗಳವರು ಸಭಾ ಪರಿತ್ಯಾಗ ಮಾಡಿದರು.

●

### ಗಿರಿ ವಜ್ರ

ಭೂಪಾಲ್— ಪನ್ನಾ ವಜ್ರಗಣಿಯಲ್ಲಿ ಸಿಕ್ಕಿದ ವಜ್ರಗಳಲ್ಲೆಲಾ ಅತಿ ದೊಡ್ಡದಾದ ವಜ್ರವು ಆಗಸ್ 16 ರಂದು ಅಧ್ಯಕ್ಷರ ಚುನಾವಣೆ ದಿನ – ಕಂಡುಹಿಡಿಯಲ್ಪಟ್ಟಿತು – ಅದನ್ನು 'ಗಿರಿ' ವಜ್ರವೆಂದು ಕರೆಯಲಾಗಿದೆ - ಅದು 16 8 ಕ್ಯಾರೆಟ್ ತೂಕವಿದೆ.

★

### ಸಹಾನುಭೂತಿ ಪರ್ಯಾಲೋಚನೆ

ಬೆಂಗಳೂರು— ಪಂಪ್‌ಸೆಟ್ ಬಗ್ಗೆ ಎಲೆಕ್ಟ್ರಿಸಿಟಿ ಬೋರ್ಡು ಹೆಚ್ಚು ಹೊರೆಯನ್ನು ತಗ್ಗಿಸಬೇಕೆಂಬ ಕೇಳಿಕೆಗೆ ತಾವು ಆಳವಾದ ಮತ್ತು ಸಹಾನುಭೂತವಾದ ಪರಾಲೋಚನೆ ಮಾಡುವುದಾಗಿ ಮುಖ್ಯ ಮಂತ್ರಿಗಳು ಶಾಸನಸಭೆಯಲ್ಲಿ ತಿಳಿಸಿದರು.

★

### ಪಟೇಲರಿಗೆ ಪೋಲೀಸ್-ಅಧಿಕಾರ

ಬೆಂಗಳೂರು— ರೆವಿನ್ಯೂ ಪಟೇಲರಿಗೆ ಪೋಲೀಸು ಅಧಿಕಾರ ಕೊಡುವ ವಿಷಯಕ್ಕಾಗಿ ಭೂ ಕಂದಾಯ ಶಾಸನ ತಿದ್ದುಪಡೆ ಮಸೂದೆಯು ಶಾಸನಸಭೆಯಲ್ಲಿ ತರಲಾಗುವದೆಂದು ಶಾಸನಸಭೆಯಲ್ಲಿ ತಿಳಿಸಲಾಯ್ತು

★

ಕರಾಚಿ— 4000 ಮೈಲಿ ದೂರದ ಸ್ಕಾಂಡಿನೇವಿಯಕ್ಕೆ ಪ್ರವಾಸ ಹೊರಟಿದ್ದ 27 ಪಾಕಿಸ್ತಾನಿಗಳನ್ನು ಸ್ವೀಡನ್ನಿನಲ್ಲಿ ತಡೆದು ಹಿಂದಕ್ಕೆ ಕಳಿಸಲಾಯಿತು.

### ಅಕ್ಕಿ ಅಗ್ಗವಾಯಿತು

ಕಲ್ಲೀಕೋಟೆ— ನೇಪಾಳವೂ ಸೇರಿ ರಾಜ್ಯದ ಹೊರಗಿನಿಂದ ಹೆಚ್ಚು ಅಕ್ಕಿ ಬಂದಿರುವುದರಿಂದ, ಕೇರಳದಲ್ಲಿ ಕೆಲವು ದಿನಗಳಿಂದ ಅಕ್ಕಿ ಬೆಲೆ ಬಹಳ ಇಳಿಯುತ್ತಿದೆ.

●

### ಯಲವಿಗಿ ರೈಲ್ವೇ ಹುರಂತ

ಹುಬ್ಬಳ್ಳಿ— ಯಲವಿಗಿ ಸ್ಟೇಷನ್ನಿನಲ್ಲಿ ಮೇಲೆ 19 ರಂದು ಆದ ರೈಲ್ವೆ ದುರಂತದಲ್ಲಿ 59 ಪ್ರಯಾಣೀಕರು ಸತ್ತ ಸಂದರ್ಭದಲ್ಲಿ ಮೂರು ಮಂದಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ.

★

### ತನಿಖೆ ನಡೆಸಲಾಗುತ್ತಿದೆ

ಬೆಂಗಳೂರು— ಹಂಪಿಯಲ್ಲಿ ಶ್ರೀ ಮಧ್ವಾಚಾರ್ಯರ ವಿಗ್ರಹಕ್ಕೆ ಜಖಂ ಆಗಿರುವ ವಿಷಯ ಬಗ್ಗೆ ಬಳ್ಳಾರಿ ಪೋಲೀಸರು ತನಿಖೆ ನಡೆಸುತ್ತಿರುವದಾಗಿ ಶಾಸನಸಭೆಯಲ್ಲಿ ತಿಳಿಸಲಾಯಿತು.

○

### ಹೆಸರು ಬದಲಾಯಿಸಿ

ನವದೆಹಲಿ— ಪಾರ್ಲಿಮೆಂಟಿನ ಕಮ್ಯುನಿಸ್ಟೇತರ 41 ಸದಸ್ಯರು, ಆಂಡಮ್ಯಾನ್ ಮತ್ತು ನಿಕೋಬರ್ ದ್ವೀಪಗಳ ಹೆಸರನ್ನು ಷಾಹೀದ್ ಮತ್ತು ಸ್ವರಾಜ್ಯ ದ್ವೀಪಗಳೆಂದು ಬದಲಾಯಿಸಲು ಭಾರತ ಗೃಹಮಂತ್ರಿಯವರನ್ನು ಒತ್ತಾಯ ಮಾಡಿರುವರು.

★

### ರೂ. 5739.37

ನವದೆಹಲಿ— ರಾಜ್ಯ ಸರಕಾರಗಳು ಕೇಂದ್ರಕ್ಕೆ ಜೂನ್ 30 ರಂದು ರೂ. 5739.37 ಕೋಟಿ ಸಾಲದ ಬಾಕಿ ಕೊಡಬೇಕಾಗಿದೆ.

★

### ನಿಧನ

ಉತ್ತರ ವಿಯಟ್ನಾಂ ಅಧ್ಯಕ್ಷ ಹೊ ಚಿ ಮಿನ್ಹರು ನಿಧನರಾದರು.

### ಸಾಹಸ ಕೃತ್ಯ

ನವದೆಹಲಿ— ವಿಮಾನಕೊಡೆ ಇಲ್ಲದೇನೇ ಒಬ್ಬ ಕೆನಡಾ ಫೋಟೋಗ್ರಾಫರು ಒಂದು ವಿಮಾನದಿಂದ 13200 ಅಡಿ ಎತ್ತರದಿಂದ ಕೆಳಕ್ಕೆ ಹಾರಿದನು.

★

### ವಿದ್ಯುಚ್ಛಕ್ತಿಯಿಂದ ರಸ್ತೆ ಕಾಯಿಸುವುದು

ಪಶ್ಚಿಮ ಜರ್ಮನಿಯ ಕಾಸೆಲ್‌ನಲ್ಲಿ ಹೆದ್ದಾರಿಯನ್ನು ಸುರಿಯುವ ಮಂಜಿನ ಅಪಾಯದಿಂದ ರಕ್ಷಿಸಲು ವಿದ್ಯುಚ್ಛಕ್ತಿಯಿಂದ ಕಾಯಿಸುತ್ತಾರೆ.

### ಅಗ್ನಿ ಅನಾಹುತದಿಂದಾದ ಅಪಾರ ನಷ್ಟ

ಬರ್ಲಿನ್ನಿನ ರಾಕ್ಷಸಾಕಾರ ಗಿಡಗಳ ತೋಟದ ಗಾಜಿನಮನೆಯಲ್ಲಿ ಜುಲೈ 31 ರಂದು ಆದ ಭೀಕರ ಅಗ್ನಿ ಅನಾಹುತದಿಂದ ಮಿಲಿಯಗಟ್ಟಲೆ ಮಾರ್ಕ್‌ಗಳ ಬೆಲೆಯ ಗಿಡಗಳೂ ಪೊದರುಗಳೂ ನಷ್ಟವಾದವು. 7 ಚದುರಡಿಯ 1650 ಕಿಟಕಿಗಳು ಹಾಳಾಗಿ ಅಮೌಲ್ಯ ಉಷ್ಣವಲಯ ಗಿಡಗಳ ಮೇಲೆ ಬಿದ್ದವು. ಏಷ್ಯಾ, ಆಫ್ರಿಕಾ, ಅಮೇರಿಕಗಳಿಂದ ತರಿಸಿದ್ದ ಗಿಡಗಳೇ ಪುಟ್ಟಹೋದವು : ತೋಟಕ್ಕೆ ಭಾರಿ ನಷ್ಟವಾಯಿತು.

### ಸಾದರ ಸ್ವೀಕಾರ

ಶ್ರೀ ಗೌರಿಶಂಕರ ಗ್ರಂಥಮಾಲೆ 63 ನೇ ಪುಷ್ಪವಾಗಿ ಪ್ರಕಟಿಸಲ್ಪಟ್ಟಿರುವ 'ಶ್ರೀ ದೇವೀ ಮಹಾತ್ಮೆ ಮತ್ತು ದೇವಿಯ ಸಹಸ್ರ ನಾಮಾವಳಿ" ಗ್ರಂಥವನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಇದೊಂದು ಭಕ್ತಿರಸಪ್ರದವಾದ ವೇದಾಂತಸಾರದಿಂದ ರಚಿತವಾದ ಅದ್ಭುತ ಸದ್ಗ್ರಂಥ. ವಚನ ಕನ್ನಡದಲ್ಲಿರುವುದರಿಂದ ಪಠಿಸಲೂ ವಿಷಯಗಳನ್ನರಿಯಲೂ ಮನನಮಾಡಲೂ ಅನುಕೂಲವಾಗಿದೆ. ಆದಿಶಕ್ತಿಯಾದ ದೇವಿಯ ಅನುಗ್ರಹ ಪಡೆದು ಅಭೀಷ್ಟ ನೆರವೇರಿಸಿಕೊಳ್ಳಲು ಸಹಾಯಕವಾಗುವ ಈ ಗ್ರಂಥದ ಉಪಯೋಗವನ್ನು ಸಕಲರೂ ಪಡೆಯಬಹುದು. ಗ್ರಂಥಕರ್ತರೂ ಪ್ರಕಾಶಕರೂ ಶ್ರೀ ಬಿ. ಜಿ. ಶಾಸ್ತ್ರಿ, 180 ನ್ಯೂ ಬ್ಯಾಂಕ್, ವಿದ್ಯಾರಣ್ಯಪುರಂ, ಮೈಸೂರು 4 ; ಬೆಲೆ ರೂ. 2.

## Golden Jubilee of 'Satyavadi'

The golden jubilee of the 'Satyavadi' is to be celebrat this month

The President, the Prime Minister, H H. the Maharaja Mysore, and o er personages have exteuded messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies Padmabhushana' Dr. M.C. Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.


SHAKTI
SUDHA

ವುಡ್‌ಲಾಂಡ್ ತಾ. 5-9-69 ರಿಂದ
ಶಿ ನ ಆಮೋಘ ಪ್ರಾರಂಭ

— ಅತ್ಯಾಕರ್ಷಣೀಯ ಈಸ್ಟ್‌ಮೆ ಕಲರ್ ಹಿಂದಿ ಚಿತ್ರ —

ಸಾ ಜ ನ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್
ಮದನಪುರಿ, ಶಬ್‌ನಮ್
ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ ದಿನ 3 ಪ್ರದರ್ಶನಗಳು ]

ಒಪೆರಾ— 5-9-69 ರಿಂದ
.... ಚಿತ್ತಾಕರ್ಷಕ ಈಸ್ಟ್‌ಮೆ ಕಲರ್ ಹಿಂದಿ ಚಿತ್ರ ....

ಮ ಹ ಲ

ನಾಯಕ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ
ಡೇವಿಡ್, ಅಜ್ರಾ, ಸುಧಿರ್
ದಿಗ್ದರ್ಶಕ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್‌ಜಿ
ದಿನ 3 ಆಟಗಳು

Quality Printing — Neat Binding
Lakshminarasimha Press
Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿ ಚೆನ್ನಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow